**<u>ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಅಫಜಲಪೂರ</u>**

**<u>ಸಿಸಿ ನಂ.377/2024</u>**

**<u>ಫಿರ್ಯಾದಿಃ</u>**

ಸರಕಾರದ ಪರವಾಗಿಃ ಅಫಜಲಪೂರ ಪೊಲೀಸ ಠಾಣೆ

**-ಃಃ ವಿರುದ್ಧ ಃಃ-**

**<u>ಆರೋಪಿ/ತರುಃ</u>**

1. ದಯಾನಂದ ತಂದೆ ಮಲ್ಲಪ್ಪ ಕಟ್ಟಿಮನಿ,
20 ವರ್ಷ, ಉಃ ಡ್ರೈವರ್ ಕೆಲಸ,
ವಾಸಃ ಬಿಲ್ವಾಡ (ಕೆ) ಗ್ರಾಮ, ತಾಃ ಅಫಜಲಪೂರ,
ಜಿಃ ಕಲಬುರಗಿ.

2. ರಾಮಪ್ಪ ತಂದೆ ಭೀಮಪ್ಪ ಹೊಸಮನಿ,
38 ವರ್ಷ, ಉಃಕೂಲಿ ಕೆಲಸ,
ವಾಸಃ ಇಂಗಳಗಿ ಗ್ರಾಮ, ತಾಃ ಅಫಜಲಪೂರ,
ಜಿಃ ಕಲಬುರಗಿ.

## <u>ಆಪಾದನೆ</u>

ನಾನು ಶ್ರೀ ಅನಿಲ ಅಮಾತೆ, ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಅಫಜಲಪೂರ ಈ ಮೂಲಕ ಕೆಳಕಂಡಂತೆ ನಿಮ್ಮನ್ನು ಆರೋಪಕ್ಕೆ ಗುರಿಪಡಿಸುತ್ತೇನೆ.

1. ದಿನಾಂಕ 30.10.2023 ರಂದು ಬೆಳಿಗ್ಗೆ 11-15 ಗಂಟೆಯ ಸುಮಾರಿಗೆ ಅಫಜಲಪೂರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಬರುವ ಅಫಜಲಪೂರ-ಆನೂರ ರಸ್ತೆಯ ಆನೂರ ಸೀಮಾಂತರ ಅಮೃತಗೌಡ ಪಾಟೀಲ ರವರ ಹೊಲದ ಹತ್ತಿರ ಅಫಜಲಪೂರದಿಂದ ಆನೂರ ಕಡೆಗೆ ಹೋಗುವಾಗ ರಸ್ತೆಯ ಎಡಬದಿಗೆ ಫಿರ್ಯಾದಿ ಚಾಸಾ-1 ಶ್ರೀಮತಿ ಜಯಶ್ರೀ ರವರ ಗಂಡ ಮೃತ ಭೀಮರಾಯ ಸಿಂಗೆ ಮತ್ತು ಚಾಸಾ-4 ರಾಜಶೇಖರ ರವರ ತಾಯಿ ಮೃತ ಶಿವಕಾಂತಮ್ಮ ಹಾಗೂ ಚಾಸಾ-8 ರಿಂದ 11 ರವರೆಲ್ಲರನ್ನು 1ನೇ ಆರೋಪಿತನಾದ ನೀವು 2ನೇ ಆರೋಪಿತನ ಹೆಸರಿಗೆ ಇರುವ ಟಂಟಂ (ಆಟೋ) ನಂ.ಕೆಎ-28-ಎ-2508 ನೇದ್ದರಲ್ಲಿ ಕೂಡಿಸಿಕೊಂಡು ಟಂಟಂ (ಆಟೋ)ವನ್ನು ಮಾನವನ ಜೀವಕ್ಕೆ ಹಾನಿಯಾಗುವ ರೀತಿಯಲ್ಲಿ ಅತಿವೇಗ ಹಾಗೂ ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಆನೂರ ಸೀಮಾಂತರ ಅಮೃತಗೌಡ ಪಾಟೀಲ ರವರ ಹೊಲದ ಹತ್ತಿರ ರಸ್ತೆಯ ಎಡಬದಿಗೆ ರಸ್ತೆಯ ಪಕ್ಕದಲ್ಲಿರುವ ತಗ್ಗಿನಲ್ಲಿ ಟಂಟಂ ಪಲ್ಟಿ ಮಾಡಿದ್ದು, ಆ ಮೂಲಕ 1ನೇ ಆರೋಪಿತನಾದ ನೀವು ಭಾ.ದಂ.ಸಂ.ಕಲಂ.279 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವೆ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

2. ಮೇಲೆ ಹೇಳಿರುವ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ 1ನೇ ಆರೋಪಿತನಾದ ನೀವು 2ನೇ ಆರೋಪಿತನ ಹೆಸರಿಗೆ ಇರುವ ಟಂಟಂ (ಆಟೋ) ನಂ.ಕೆಎ-28-ಎ-2508 ನೇದ್ದರಲ್ಲಿ ಕೂಡಿಸಿಕೊಂಡು ಟಂಟಂ (ಆಟೋ)ವನ್ನು ಮಾನವನ ಜೀವಕ್ಕೆ ಹಾನಿಯಾಗುವ ರೀತಿಯಲ್ಲಿ ಅತಿವೇಗ ಹಾಗೂ ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಆನೂರ ಸೀಮಾಂತರ ಅಮೃತಗೌಡ ಪಾಟೀಲ ರವರ ಹೊಲದ ಹತ್ತಿರ ರಸ್ತೆಯ ಎಡಬದಿಗೆ ರಸ್ತೆಯ ಪಕ್ಕದಲ್ಲಿರುವ ತಗ್ಗಿನಲ್ಲಿ ಟಂಟಂ ಪಲ್ಟಿ ಮಾಡಿದ ಪರಿಣಾಮ ಟಂಟಂ ನಲ್ಲಿದ್ದ ಮೃತ ಭೀಮರಾಯ ಸಿಂಗೆ ರವರಿಗೆ ತಲೆಗೆ ಭಾರಿ ರಕ್ತಗಾಯವಾಗಿ ತಲೆ ಚಪ್ಪಟೆಯಾಗಿ ಮಾಂಸ ಖಂಡ ಹೊರ ಬಂದು ಸ್ಥಳದಲ್ಲಿಯೇ

ಮೃತಪಟ್ಟಿದ್ದು, ಚಾಸಾ-14 ರಾಜಶೇಖರ ರವರ ತಾಯಿ ಮೃತ ಶಿವಕಾಂತಮ್ಮಳಿಗೆ ಎಡಗಡೆ ಹುಬ್ಬಿನ ಹತ್ತಿರ ಭಾರಿ ರಕ್ತಗಾಯ, ಎಡಗಡೆ ಕೈ ಹತ್ತಿರ ಹರಿದ ಗಾಯಗಳಾಗಿದ್ದು, ಚಾಸಾ-12 ಬಾಬುರಾವ ರವರು ಪ್ರತ್ಯಕ್ಷವಾಗಿ ನೋಡಿ ಸದರಿ ಗಾಯಾಳುದಾರರ ಹತ್ತಿರ ಹೋಗಿ ಒಂದು ಖಾಸಗಿ ವಾಹನದಲ್ಲಿ ಚಿಕಿತ್ಸೆ ಕುರಿತು ಆಸ್ಪತ್ರೆಗೆ ಕಳುಹಿಸಿದ್ದು ಚಿಕಿತ್ಸೆ ಪಡೆದುಕೊಂಡು ತನ್ನ ಮನೆಗೆ ಬಂದು ಆರೈಕೆ ಮಾಡಿಕೊಳ್ಳುತ್ತಿದ್ದಾಗ ಸದರಿ ಘಟನೆಯಲ್ಲಿ ಸಂಭವಿಸಿದ ಗಾಯಗಳಿಂದ ದಿನಾಂಕಃ 16.11.2023 ರಂದು ಮಧ್ಯಾಹ್ನ 03-30 ಗಂಟೆ ಸುಮಾರಿಗೆ ಶಿವಕಾಂತಮ್ಮಳು ಮೃತಪಡಲು ಕಾರಣನಾಗಿ, ಆ ಮೂಲಕ 1ನೇ ಆರೋಪಿತನಾದ ನೀವು ಭಾ.ದಂ.ಸಂ. ಕಲಂ 304(ಎ) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವೆ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

3. ಮೇಲೆ ಹೇಳಿರುವ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ 1ನೇ ಆರೋಪಿತನಾದ ನೀವು 2ನೇ ಆರೋಪಿತನ ಹೆಸರಿಗೆ ಇರುವ ಟಂಟಂ (ಆಟೋ) ನಂ.ಕೆಎ-28-ಎ-2508 ನೇದ್ದರಲ್ಲಿ ಕೂಡಿಸಿಕೊಂಡು ಟಂಟಂ (ಆಟೋ)ವನ್ನು ಮಾನವನ ಜೀವಕ್ಕೆ ಹಾನಿಯಾಗುವ ರೀತಿಯಲ್ಲಿ ಅತಿವೇಗ ಹಾಗೂ ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಆನೂರ ಸೀಮಾಂತರ ಅಮೃತಗೌಡ ಪಾಟೀಲ ರವರ ಹೊಲದ ಹತ್ತಿರ ರಸ್ತೆಯ ಎಡಬದಿಗೆ ರಸ್ತೆಯ ಪಕ್ಕದಲ್ಲಿರುವ ತಗ್ಗಿನಲ್ಲಿ ಟಂಟಂ ಪಲ್ಟಿ ಮಾಡಿದ ಪರಿಣಾಮ ಟಂಟಂ ನಲ್ಲಿದ್ದ ಚಾಸಾ-8 ಹಿರಗೇಪ್ಪ ರವರಿಗೆ ಎರಡು ಮೊಳಕಾಲಿಗೆ ತರಚಿದ ಗಾಯಗಳು, ಬಲಭುಜಕ್ಕೆ ಗುಪ್ತಗಾಯಗಳಾಗಿದ್ದು, ಚಾಸಾ-9 ಶ್ರೀಮತಿ ಶಾಂತಾಬಾಯಿ ರವರಿಗೆ ಬಲಗಡೆ ತಲೆಯ ಮಧ್ಯೆ ತರಚಿದ ಸಾದಾ ಗಾಯಗಳಾಗಿದ್ದು, ಚಾಸಾ-10 ನೀಲಮ್ಮ ರವರಿಗೆ ಎಡಕಿವಿ ಹರಿದು, ಅಲ್ಲಲ್ಲಿ ಎಡಗೈ ಮುಂಗೈ ಉಬ್ಬಿ ಗಾಯಗಳಾಗಿದ್ದು, ಚಾಸಾ-11 ಶ್ರೀಮತಿ ಶಾಂತಾಬಾಯಿ@ ಶಾಮಲಾಬಾಯಿ ರವರಿಗೆ ಬಲಗಣ್ಣಿನ ಹುಬ್ಬಿನ ಹತ್ತಿರ ಭಾರಿ ರಕ್ತಗಾಯ, ಎಡಗಡೆ ಕೈ ಹತ್ತಿರ ಹರಿದ ಗಾಯವಾಗಲು ಕಾರಣನಾಗಿ, ಆ ಮೂಲಕ 1ನೇ ಆರೋಪಿತನಾದ ನೀವು ಭಾ.ದಂ.ಸಂ. ಕಲಂ 337, 338 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವೆ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

4. ಮೇಲೆ ಹೇಳಿರುವ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ 1ನೇ ಆರೋಪಿಯಾದ ನೀವು ಚಾಲನಾ ಪರವಾನಿಗೆ ಇಲ್ಲದೇ ಕೆಎ-28-ಎ-2508 ನೇದ್ದರ ಟಂಟ ಆಟೋವನ್ನು ಅತಿವೇಗ ಹಾಗೂ ನಿಷ್ಕಾಳಜಿತನದಿಂದ ಟಂಟ ಚಲಾಯಿಸಿ ಅಪಘಾತಪಡಿಸಿದ್ದು, ಆ ಮೂಲಕ 1ನೇ ಆರೋಪಿತನಾದ ನೀವು ಮೋಟಾರು ವಾಹನ ಕಾಯ್ದೆ ಕಲಂ.3(1)181 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

5. ಮೇಲೆ ಹೇಳಿರುವ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ 2ನೇ ಆರೋಪಿಯಾದ ನೀವು ನಿಮ್ಮ ಹೆಸರಿನಲ್ಲಿರುವ ಕೆಎ-28-ಎ-2508 ನೇದ್ದರ ಟಂಟ ಆಟೋವನ್ನು ವಿಮೆ ಮಾಡಿಸದೆ 1ನೇ ಆರೋಪಿತನಿಗೆ ಚಾಲನೆ ಮಾಡಲು ನೀಡಿದ ಕಾರಣ, ಆ ಮೂಲಕ 2ನೇ ಆರೋಪಿತನಾದ ನೀವು ಮೋಟಾರು ವಾಹನ ಕಾಯ್ದೆ ಕಲಂ.196 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

6. ಮೇಲೆ ಹೇಳಿರುವ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ 2ನೇ ಆರೋಪಿಯಾದ ನೀವು ನಿಮ್ಮ ಹೆಸರಿನಲ್ಲಿರುವ ಕೆಎ-28-ಎ-2508 ನೇದ್ದರ ಟಂಟ ಆಟೋವನ್ನು ವಾಹನದ ನೋಂದಣಿ ನವೀಕರಿಸದೇ ಹಾಗೂ 1ನೇ ಆರೋಪಿತನು ನಿಗಧಿತ ವಾಹನ ಚಾಲನಾ ಪರವಾನಿಗೆ ಹೊಂದಿಲ್ಲದ ವಿಷಯ ತಿಳಿದಿದ್ದರೂ ಸಹ 1ನೇ ಆರೋಪಿತನಿಗೆ ಟಂಟಂ ಆಟೋವನ್ನು ಚಾಲನೆ ಮಾಡಲು ನೀಡಿದ ಕಾರಣ, ಆ ಮೂಲಕ 2ನೇ ಆರೋಪಿತನಾದ ನೀವು ಮೋಟಾರು ವಾಹನ ಕಾಯ್ದೆ ಕಲಂ.180, 192 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ, ಅದು ನನ್ನ

ಸಂಜ್ಞಿತೆಗೆ ಬಂದಿರುತ್ತದೆ.

**<u>1 ಮತ್ತು 2ನೇ ಆರೋಪಿತರ ಹೇಳಿಕೆ</u>**

ಪ್ರ:-1) ಈ ಓದಿ ಹೇಳಲಾದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿರಾ?

ಉ: ಆ-1

ಆ-2

ಪ್ರ:-2) ನಿಮ್ಮ ತಪ್ಪನ್ನು ಒಪ್ಪಿಕೊಳ್ಳುತ್ತಿರೊ ಅಥವಾ ವಿಚಾರಣೆ ನಡೆಯಬೇಕಾ?

ಉ: ಆ-1

ಆ-2

(ಆಪಾದನೆಯನ್ನು 1 ಮತ್ತು 2ನೇ ಆರೋಪಿತರಿಗೆ ಓದಿ ಹೇಳಿದ್ದು, ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿದ್ದು, ಅದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ)

ದಿನಾಂಕ: 17.01.2026

ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ. ಅಫಜಲಪೂರ.